

**ಪತ್ರಿಕಾ ಪ್ರಕಟಣೆ**

**ವಿಜಯಪುರ**

**ದಿನಾಂಕ: 12.08.2021.**

**1] ಎ.ಪಿ.ಎಮ್.ಸಿ ಪೊಲೀಸ ಠಾಣೆ ಗುನ್ನೆ ನಂ: 75/2021 ಕಲಂ: ಮನುಷ್ಯ ಕಾಣೆ**

ದಿನಾಂಕ: 03.08.2021 ರಂದು 09:00 ಗಂಟೆ ಸುಮಾರಿಗೆ ಇದರಲ್ಲಿಯ ಕಾಣೆಯಾದ ಸಚೀನ್ ರಾಜೇಂದ್ರ ಇರಮಾಣಿ, ಸಾ॥ ಉಮರಜ್ ತಾ॥ ಚಡಚಣ, ಜಿ॥ ವಿಜಯಪುರ ಹಾಲಿ ಗಚ್ಚಿನಕಟ್ಟಿ ಕಾಲನಿ ನುಚ್ಚಿ ಬಿಲ್ಡಿಂಗ್ ವಿಜಯಪುರ ಈತನು ಗಚ್ಚಿನಕಟ್ಟಿ ಕಾಲನಿಯ ನುಚ್ಚಿ ಬಿಲ್ಡಿಂಗ್‌ದಲ್ಲಿ ಇರುವ ರೂಮಿನಿಂದ ಹೊರಗಡೆ ಹೋದವನು ಇಲ್ಲಿಯವರೆಗೂ ಪರ್ತ ಮನೆಗೂ ಬರದೇ ಎಲ್ಲಿಯೊ ಹೋಗಿ ಕಾಣೆಯಾಗಿದ್ದು ಅದೆ. ಈ ಬಗ್ಗೆ ರಾಜೇಂದ್ರ ರೇವಪ್ಪ ಇರಮಾಣಿ, ಸಾ: ಉಮರಜ ತಾ॥ ಚಡಚಣ, ಜಿ॥ ವಿಜಯಪುರ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 11.08.2021 ರಂದು ಎ.ಪಿ.ಎಮ್.ಸಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**2] ಕಲಕೇರಿ ಪೊಲೀಸ ಠಾಣೆ ಗುನ್ನಾ. ನಂ: 101/2021 ಕಲಂ: 15 [ಎ], 32 [3] ಕೆಇ ಆ್ಯಕ್ಟ್**

ದಿನಾಂಕ 10.08.2021 ರಂದು 15:50 ಗಂಟೆ ಸುಮಾರಿಗೆ ಇದರಲ್ಲಿಯ ಆರೋಪಿತನಾದ ರತನಸಿಂಗ ಚಂದು ರಾಠೋಡ ಸಾ॥ ಕರವಿನಾಳ ಎಲ್,ಟಿ ಈತನು ಕರವಿನಾಳ ಗ್ರಾಮದಲ್ಲಿ ತನಗೆ ಯಾವುದೆ ಲೈಸನ್ಸ ವ ಪರವಾನಗಿ ಇಲ್ಲದೆ ತನ್ನ ಚಹದ ಅಂಗಡಿ ಮುಂದೆ ಸಾರ್ವಜನಿಕ ಸ್ಥಳದಲ್ಲಿ ಸಾರ್ವಜನಿಕರಿಗೆ ಸರಾಯಿ ಕುಡಿಯಲು ಸ್ಥಳಾವಕಾಶ ಮಾಡಿಕೊಡುತ್ತಿರುತ್ತಾನೆ ಈ ಬಗ್ಗೆ ಸ:ತ: ನಿಂಗಪ್ಪ ಪೂಜೇರಿ ಪಿ.ಎಸ್.ಐ ಕಲಕೇರಿ ಪೊಲೀಸ್ ಠಾಣೆ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 11.08,2021 ರಂದು ಕಲಕೇರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**3] ಕಲಕೇರಿ ಪೊಲೀಸ ಠಾಣೆ ಗುನ್ನಾ ನಂ: 100/2021 ಕಲಂ: 78(3) ಕೆಪಿ ಆ್ಯಕ್ಟ್**

ದಿನಾಂಕ 09.08.2021 ರಂದು 16;45 ಗಂಟೆ ಸುಮಾರಿಗೆ ಇದರಲ್ಲಿಯ ಆರೋಪಿತನಾದ ಅಮೋಗಿಸಿದ್ದ ಬಸಪ್ಪ ತುಂಬಗಿ ಸಾ॥ ಡವಳಾರ ಈತನು ಡವಳಾರ ಗ್ರಾಮದ ಹಣಮಂತ ದೇವರ ಗುಡಿಯ ಮುಂದೆ ಸಾರ್ವಜನಿಕ ಸ್ಥಳದಲ್ಲಿ ಒಬ್ಬನು 1 ರೂಗೆ 80 ರೂ ಕೊಡುವ ಕರಾರಿನ ಮೇಲೆ ಓ.ಸಿ ಚೀಟಿಗಳನ್ನು ಬರೆದುಕೊಳ್ಳುತ್ತಾ ಸಾರ್ವಜನಿಕರಿಗೆ ಸಣ್ಣ ಸಣ್ಣ ಚೀಟಿ ಮಾಡಿ ಕೊಡುತ್ತಿದ್ದಾಗ ಸಿಕ್ಕ ಅಪರಾಧ. ಈ ಬಗ್ಗೆ ಸ:ತ: ನಿಂಗಪ್ಪ ಪೂಜೇರಿ ಪಿ.ಎಸ್.ಐ ಕಲಕೇರಿ ಪೊಲೀಸ್ ಠಾಣೆ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 11.08.2021 ರಂದು ಕಲಕೇರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**4] ಇಂಡಿ ಗ್ರಾಮೀಣ ಪೊಲೀಸ ಠಾಣೆ ಗುನ್ನಾ ನಂ: 149/2021 ಕಲಂ: 15[ಎ] 32,[3] ಕೆಇ ಆ್ಯಕ್ಟ್**

ದಿನಾಂಕ 11.08.2021 ರಂದು 15.00 ಗಂಟೆ ಸುಮಾರಿಗೆ ಇದರಲ್ಲಿಯ ಆರೋಪಿತನಾದ ವಿಠ್ಠಲ ಬಸಪ್ಪ ಕೊಳಿ ಸಾ: ಹಿರೇಬೇನೂರ ಈತನು ಸರಕಾರದಿಂದ ಯಾವುದೇ ಲೈಸನ್ಸ ವ ಪರಮೀಟ ಇಲ್ಲದೆ ತನ್ನ ಹೊಟೆಲ್‌ದಲ್ಲಿ ಸಾರ್ವಜನಿಕರಿಗೆ ಸೆರೆ ಕುಡಿಯಲು ಅವಕಾಶ ಮಾಡಿಕೊಟ್ಟಾಗ ಸರಾಯಿ ಬಾಟಲಿ ಸಮೇತ ಸಿಕ್ಕ ಅಪರಾಧ. ಜಪ್ತಾದ ಮುದ್ದೇ ಮಾಲು: 1] ಓಲ್ಡ್ ಟವರೀನ ವಿಸ್ಕಿ 180 ಒಂದು ಪೌಚ್ ಕಿ: 86.75. 2] ಫೈನ್ ವಿಸ್ಕಿ ಲೇಬಲ್ 180 ಒಂದು ಪೌಚ್ ಅರ್ದ ತುಂಬಿದ್ದು 55.97. 3] ಪ್ಲಾಸ್ಟಿಕ್ ಗ್ಲಾಸುಗಳು 2 ಅಕಿ; 00–00/ 4] ಖಾಲಿ ವಾಟರ್ ಬಾಟಲ್ 2 ಅಕಿ:00:00 ರೂಗಳು ಈ ಬಗ್ಗೆ ಸ:ತ: ಮಾಳಪ್ಪ ಪೂಜಾರಿ ಪಿಎಸ್ಐ ಇಂಡಿ ಗ್ರಾಮೀಣ ಪೊಲೀಸ ಠಾಣೆ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 11.08.2021 ರಂದು ಇಂಡಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**5] ಚಡಚಣ ಪೊಲೀಸ ಠಾಣೆ ಗುನ್ನಾ ನಂ: 79/2021 ಕಲಂ: 272, 273, 420 ಐಪಿಸಿ & 20[2], 24 ಕೊಟ್ಪಾ ಆ್ಯಕ್ಟ್–2015**

ದಿನಾಂಕ 11.08.2021 ರಂದು ಮುಂಜಾನೆ: 09.00 ಗಂಟೆ ಸುಮಾರಿಗೆ ಇದರಲ್ಲಿಯ ಆರೋಪಿತರಾದ 1] ಲವಪ್ಪ ಬಾಬು ಬನಸೋಡೆ ಸಾ॥ ಚಡಚಣ 2] ಶಿವನಿಂಗಪ್ಪ ಅಣ್ಣಪ್ಪ ಬನಸೋಡೆ ಸಾ॥ ಚಡಚಣ ಇವರು ಸರ್ಕಾರದಿಂದಾಗಲಿ ಅಥವಾ ಸಂಬಂಧಪಟ್ಟ ಇಲಾಖೆಯಿಂದಾಗಲಿ ಪರವಾನಿಗೆ ಅಥವಾ ಲೈಸನ್ಸ ಪಡೆಯದೆ ಹಾಗೂ ಸರ್ಕಾರಕ್ಕೆ ಯಾವುದೇ ತೆರಿಗೆ/ಟ್ಯಾಕ್ಸ್/ಜಿಎಸ್‌ಟಿ ಭರಣಾ ಮಾಡದೆ ಮೋಸದಿಂದ ಅಡಿಕೆ ಚೂರು, ತಿನಸೌ ತಂಬಾಕು, ಸುಣ್ಣದ ನೀರಿನಲ್ಲಿ ಬೆರಸಿ ಕಲಬೆರಿಕೆ ಮಾಡಿ ಮಶೀನ ಮೂಲಕ ತಯಾರಿಸಿದ ಗುಟಕಾ ನಮೂನೆಯ ಮಾವ ಅನ್ನುವ ಪದಾರ್ಥ ತಿಂದರೆ ಮಾನವೀಯ ಆರೋಗ್ಯಕ್ಕೆ ಹಾನಿಕಾರಕವಾಗುತ್ತದೆ ಅಂತಾ ತಿಳಿದು ತಿಳಿದು ಅದನ್ನು ತಯಾರಿಸಿ, ಎಚ್ಚರಿಕೆ ಸಂದೇಶದ ಸ್ಟಿಕ್ಕರ್ ಅಂಟಿಸದೆ/ಮುದ್ರಿಸದೆ ಮಾರಾಟ ಮಾಡುವ ಉದ್ದೇಶದಿಂದಾ ಮಾವಾವನ್ನು ತಯಾರಿಸುತ್ತಿರುವಾಗ ಸಲಕರಣೆಗಳು ಅಂದಾಜು ಕಿಮ್ಮತ್ತು: 11,800/– ರೂ ದಷ್ಟು ಮಾಲಿನ ಸಮೇತ ಸಿಕ್ಕಿದ್ದು ಅದೆ. ಈ ಬಗ್ಗೆ ಸ:ತ: ಎಂ.ಎ.ಸತಿಗೌಡರ ಪಿ.ಎಸ್.ಐ, ಚಡಚಣ ಪಿ.ಎಸ್. ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 11.08.2021 ರಂದು ಚಡಚಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**6] ಕಲಕೇರಿ ಪೊಲೀಸ ಠಾಣೆ ಗುನ್ನಾ ನಂ: 99/2021 ಕಲಂ: ಮಹಿಳೆ ಕಾಣೆ.**

ದಿನಾಂಕ 11.08.2021 ರಂದು ನಸೂಕಿನ 03;00 ಗಂಟೆ ಸುಮಾರಿಗೆ ಇದರಲ್ಲಿಯ ಕಾಣೆಯಾದ ಶೋಭಾ ತಂದೆ ಬಲಭೀಮ ನಾಯ್ಕೋಡಿ ವಯಾ–20 ವರ್ಷ ಜಾತಿ–ಹಿಂದೂ ತಳವಾರ ಉದ್ಯೋಗ–ಮನೆ ಕೆಲಸ ಸಾ। ಬಿಬಿ ಇಂಗಳಗಿ ಇವಳು ತಮ್ಮ ಮನೆಯಿಂದ ಸಂಡಾಸಕ್ಕೆ ಹೋಗಿಬರುತ್ತೆನೆ ಅಂತಾ ಹೇಳಿ ಮನೆಯಿಂದ ಹೋದವಳು ಪರ್ತ ಮನೆ ಬಾರದೇ ಎಲ್ಲಿಯೋ ಹೋಗಿ ಕಾಣೆಯಾಗಿರುತ್ತಾಳೆ. ಈ ಬಗ್ಗೆ ಬಲಭೀಮ ಮಡಿವಾಳಪ್ಪ ನಾಯ್ಕೋಡಿ ಸಾ॥ ಬಿಬಿ ಇಂಗಳಗಿ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 11.08.2021 ರಂದು ಕಲಕೇರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.